**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೊಂದನೆಯ ಅಧಿವೇಶನ**

# ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಎರಡನೇ ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–33)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾನ್ಕಲನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಎರಡನೇ ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 6ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 28) 6ನೇ ಪ್ರಕರಣದ ಎರಡನೆಯ ಪರಂತುಕದ ಮತ್ತು ಅದಕ್ಕೆ ಸಂಬಂಧಿಸಿದ ವಿವರಣೆಯ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ ಒಂದು ಕೋಟಿ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳೆಂದು ಪ್ರವರ್ಗ-Iರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು ಮತ್ತು ಅಂಥ ಕಾಮಗಾರಿಗಳ

ಸಂಖ್ಯೆಯ ಶೇಕಡ 15 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳೆಂದು ಪ್ರವರ್ಗ-II(ಎ)ರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಅದೂ ಅಲ್ಲದೆ, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಅಥವಾ ಸಂದರ್ಭಾನುಸಾರವಾಗಿ ಹಿಂದುಳಿದ ವರ್ಗಗಳ ಪ್ರವರ್ಗ-II(ಎ)ಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿದ್ದಲ್ಲಿ, ಅಂಥ ಕಾಮಗಾರಿಗಳನ್ನು ಇತರರಿಗೆ ಟೆಂಡರ್ ನೀಡಬಹುದು.

**ವಿವರಣೆ:-** ಮೇಲಿನ ಪರಂತುಕಗಳ ಉದ್ದೇಶಕ್ಕಾಗಿ,-

(1) "ಪ್ರವರ್ಗ-I" ಎಂದರೆ ಆದಾಯ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಲ್ಲಿ ಪ್ರವರ್ಗ-I ಎಂಬುದಾಗಿ ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗ.

(2) "ಪ್ರವರ್ಗ-II(ಎ)" ಎಂದರೆ ಆದಾಯ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಲ್ಲಿ ಪ್ರವರ್ಗ-II(ಎ) ಎಂಬುದಾಗಿ ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗ. "

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಹಿಂದುಳಿದ ವರ್ಗಗಳ ಸಮುದಾಯದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಮತ್ತು ಒಂದು ಕೋಟಿ ರೂಪಾಯಿಗಳವರೆಗಿನ ಒಟ್ಟು ಸರ್ಕಾರಿ ಕಾಮಗಾರಿ ಕೆಲಸಗಳ ಪೈಕಿ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ವ್ಯಕ್ತಿಗಳು ಹಾಗೂ ಶೇಕಡ 15ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-II(ಎ)ಗೆ ಸೇರಿದ ವ್ಯಕ್ತಿಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| **ಖಂಡ 2** | ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 6ನೇ ಪ್ರಕರಣದ ಪರಂತುಕವು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವ ಸಂಬಂಧದಲ್ಲಿ ಅನುಸರಿಸುವ ಪ್ರಕ್ರಿಯೆಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಯವರು

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ

## (2000ರ ಕರ್ನಾಟಕ ಅಧಿನಿಯಮ ಸಂಖ್ಯೆ 29) ಉದ್ಧೃತ ಭಾಗ

**xx xx xx**

**6. ಸಂಗ್ರಹಣ ಸಂಸ್ಥೆಗಳು ಕಾರ್ಯವಿಧಾನವನ್ನು ಅನುಸರಿಸುವುದು.-** ಈ ಅಧಿನಿಯಮದಲ್ಲಿ ಅಥವಾ ಇದರಡಿ ರಚಿಸಿದ ನಿಯಮಗಳಲ್ಲಿ ನಿರೂಪಿಸಲಾದ ಕಾರ್ಯ ವಿಧಾನಕ್ಕನುಸಾರವಾಗಿಯಲ್ಲದೆ ಈ ಅಧಿನಿಯಮದ ಪ್ರಾರಂಭದ ತರುವಾಯ ಒಂದು ಸಂಗ್ರಹಣಾ ಸಂಸ್ಥೆಯು ಯಾವುದೇ ಟೆಂಡರನ್ನು ಆಹ್ವಾನಿಸತಕ್ಕದ್ದಲ್ಲ, ಪ್ರಕ್ರಿಯೆಗೊಳಪಡಿಸತಕ್ಕದ್ದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

"ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ 50 ಲಕ್ಷ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಶೇಕಡ 17.15ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು ಮತ್ತು ಅಂಥ ಕಾಮಗಾರಿಗಳ ಶೇಕಡ 6.95ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಮತ್ತು ಪರಂತು, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರವಾಗಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿದ್ದಲ್ಲಿ, ಅಂಥ ಕಾಮಗಾರಿಗಳನ್ನು ಇತರರಿಗೆ ಟೆಂಡರ್ ನೀಡಬಹುದು.

**ವಿವರಣೆ:**- ಈ ಪರಂತುಕದ ಉದ್ದೇಶಕ್ಕಾಗಿ,-

(1) "ಅನುಸೂಚಿತ ಜಾತಿಗಳು" ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರ ಭಾಗ- VII ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಜಾತಿಗಳ ಉಲ್ಲೇಖ ಹೊಂದಿರತಕ್ಕದ್ದು.

(2) "ಅನುಸೂಚಿತ ಪಂಗಡಗಳು" ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಪಂಗಡಗಳು) ಆದೇಶ, 1950ರ ಭಾಗ- VI ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಪಂಗಡಗಳ ಉಲ್ಲೇಖ ಹೊಂದಿರತಕ್ಕದ್ದು."

**xx xx xx**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 300, 14ನೇ ಡಿಸೆಂಬರ್ 2023

**KARNATAKA LEGISLATIVE COUNCIL**
**ONE HUNDRED AND FIFTY FIRST SESSION**

# THE KARNATAKA TRANSPARENCY IN PUBLIC PROCUREMENTS (SECOND AMENDMENT) BILL, 2023

**(LA Bill No. 33 of 2023)**

**(As passed by the Karnataka Legislative Assembly)**

A Bill further to amend the Karnataka Transparency in Public Procurements Act, 1999.

Whereas it is expedient further to amend the Karnataka Transparency in Public Procurements Act, 1999 (Karnataka Act 29 of 2000) for the purposes hereinafter appearing;

Be it enacted by the Karnataka State Legislature in the Seventy fourth year of the Republic of India as follows:-

**1. Short title and commencement.-** (1) This Act may be called the Karnataka Transparency in Public Procurements (Second Amendment) Act, 2023.

(2) It shall come into force at once.

**2. Amendment of section 6.-** In the Karnataka Transparency in Public Procurements Act, 1999 (Karnataka Act 29 of 2000), in section 6, after second proviso and explanation relating thereto the following shall be inserted, namely:-

"Provided also that, the tender inviting authority shall, in the notified Departments out of those construction works, value of which does not exceed rupees one crore such number of works not exceeding 4 percent be tendered only among the tenderers belonging to the backward castes as specified in Category-I as Backward Classes and such number of works not exceeding 15 percent to be tendered only among tenderers belonging to backward castes as specified in Category II(A) as Backward Classes notified by the Government, by taking out notices, communications and publications required to be taken following the prescribed procedures:

Provided also that, if no tender from persons belonging to the Category-I and Category II(A) of Backward Classes as the case may be, is received in response to the invitation in two attempts such works may be tendered among others.

**Explanation:** For the purpose of above provisos,-

(1) Category-I shall mean the backward classes specified as Category-I in the orders issued by the State Government from time to time without considering the income criteria.

Category-II (A) shall mean the backward classes specified as Category-II (A) in the orders issued by the State Government from time to time without considering the income criteria.

## STATEMENT OF OBJECTS AND REASONS
**(As appended to at the time of introduction)**

It is considered necessary to amend the Karnataka Transparency in Public Procurements Act, 1999 (Karnataka Act 28 of 2000) to overcome the unemployment problem in the Backward Classes and to encourage their participation in such number of works not exceeding 4 percent for persons belonging to the Category-I of Backward Classes and not exceeding 15 percent for the persons belonging to the Category-II(A) of Backward Classes out of the total number of Government construction works upto rupees one crore.

Hence the Bill.

## FINANCIAL MEMORANDUM

There is no extra expenditure by the proposed legislative measure.

## MEMORANDUM REGARDING DELEGATED LEGISLATION

| | |
|---|---|
| Clause-2 | The proviso to section 6 proposed to be inserted by this clause empowers the State Government to make rules regarding the procedure of taking out notices, communications and publications required to be taken by the tender inviting authority. |

The proposed delegation of legislative power is normal in character.

**SIDDARAMAIAH**
Chief Minister and
Minister for Finance

**K.R. MAHALAKSHMI**
Secretary
Karnataka Legislative Council

## ANNEXURE

## Extract of the Karnataka Transparency in Public Procurement Act, 1999 (Karnataka Act No. 29 of 2000)

**XXX XXX XXX**

**6. Procurement Entities to follow Procedure.-** No tender shall be invited, processed or accepted by a Procurement Entity after the commencement of this Act except in accordance with the procedure laid down in this Act or the rules made thereunder.

Provided that, the tender inviting authority shall, in the notified Departments out of those construction works, value of which does not exceed Rs.1.00 crore such number of works not exceeding 17.15 percent be tendered only among the tenderers belonging to the Scheduled Castes Category and such number of works not exceeding 6.95 percent be tendered only among tenderers belonging to the Scheduled Tribes Category, by taking out notices, communications and publications required to be taken following the prescribed procedures:

Provided further that, if no tender from persons belonging to the Scheduled Castes or Scheduled Tribes as the case may be, is received in response to the invitation in two attempts such works may be tendered among others.

**Explanation:-** For the purpose of this proviso,-

(1) "Scheduled Castes" shall have reference to the Scheduled Castes specified in part VII of the Constitution (Scheduled Castes) Order, 1950 made under Article 341 of the Constitution of India and as amended from time to time;

(2) "Scheduled Tribes" shall have reference to the Scheduled Tribes specified in part VI of the Constitution (Scheduled Tribes) Order, 1950 made under Article 342 of the Constitution of India and as amended from time to time;

**XXX XXX XXX**

Govt. Press, Suvarna Vidhana Soudha, Belgavi, 14TH Dec, 2023, P7, W.D. , Copies 300